**<u>ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದೇವದುರ್ಗ</u>**

**<u>ಸಿ.ಸಿ ನಂಬರ್ಃ 885/2024</u>**

**ಫಿರ್ಯಾದಿ** ಃ **ಸರ್ಕಾರದ ಪರವಾಗಿ** ದೇವದುರ್ಗ **ಪೊಲೀಸರು,**
**ದೇವದುರ್ಗ ತಾಲ್ಲೂಕು.**

**ವಿರುದ್ಧ**

**ಆರೋಪಿತರು** ಃ 1. ದೀಪಕ್ ಕುಮಾರ @ ದೀಪಕ್@ದೀಪಕ್ ಅಮಬೋರೆ ತಂದೆ ದೊಂಡಿಬರಾವ್ ಅಮಬೋರೆ, 56 ವರ್ಷ, ವಾಸ – ಅಫ್ಜಲ್ ಪುರ, ತಾಃ ಅಫ್ಜಲ್ ಪುರ, ಕಲಬುರಗಿ ಜಿಲ್ಲೆ.

## <u>ಆಪಾದನೆ</u>

**<u>ಶ್ರೀ</u> ರಫೀಕ್ ಅಹ್ಮದ್ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ದೇವದುರ್ಗ, ಆದ ನಾನು ಈ ಕೆಳಗಿನ ಆಪಾದನೆಯನ್ನು ನಿಮ್ಮ ಮೇಲೆ ಹೊರಿಸುವುದೇನೆಂ**ದರೆ,

ದಿನಾಂಕ 14-04-2024 ರಂದು ಮದ್ಯಾಹ್ನ 12.30 ಗಂಟೆ ಸುಮಾರಿಗೆ ದೇವದುರ್ಗ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ದೇವದುರ್ಗ-ರಾಯಚೂರು ಮುಖ್ಯ ರಸ್ತೆಯಲ್ಲಿ ದೇವದುರ್ಗ ಕಿತ್ತೂರು ಚನ್ನಮ್ಮ ಶಾಲೆಯ ಹತ್ತಿರದಲ್ಲಿರುವ ಸಣ್ಣದರ್ಗಾದ ಹತ್ತಿರ ರಸ್ತೆಯಲ್ಲಿ ಆರೋಪಿತನು ಕೆ.ಕೆ.ಎಸ್.ಆರ್.ಟಿ.ಸಿ. ಬಸ್ ನಂ. ಕೆ.ಎ-32/ಎಫ್-2439 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ನಡೆಸಿಕೊಂಡು ಹಾಗೂ ಮಾನವ ಜೀವಕ್ಕೆ ಹಾನಿಯುಂಟು ಮಾಡುವ ರೀತಿಯಲ್ಲಿ ಚಾಲನೆ ಮಾಡಿದ್ದು. ಆ ಮೇರೆಗೆ **ನೀವು ಭಾ.ದಂ.ಸಂ.ಕಲಂ 279, ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನು ಕೆ.ಕೆ.ಎಸ್.ಆರ್.ಟಿ.ಸಿ. ಬಸ್ ನಂ. ಕೆ.ಎ-32/ಎಫ್-2439 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಹೋಗಿ ರಸ್ತೆಯಲ್ಲಿ ಮುಂದೆ ಹೊರಟಿದ್ದ ಪ್ಯಾಷನ್ ಪ್ರೋ.ಮೋಟರ್ ಸೈಕಲ್ ನಂ.ಕೆ.ಎ-36/ಇ.ಬಿ-2439 ನೇದ್ದನ್ನು ಓವರ್ ಟೇಕ್ ಮಾಡುವ ಕಾಲಕ್ಕೆ ಹಿಂದಿನಿಂದ ಟಕ್ಕರಕೊಟ್ಟಿದ್ದರಿಂದ ಸಾಕ್ಷಿ ನಂ.5 ಈಕೆಗೆ ಬಲ ಎದೆಗೆ ಗಾಯಗಳಾಗಿದ್ದು, ಕೈಕಾಲುಗಳಿಗೆ ತೆರಚಿದ ಗಾಯಾಗಳಾಗಿದ್ದು, ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಸಾಕ್ಷಿ ನಂ.7 ರವರಿಗೆ ಎದೆಗೆ ಒಳಪೆಟ್ಟಾಗಿದ್ದು, ಸಾದಾ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೇರೆಗೆ ನೀನ್ನು **ಭಾ.ದಂ.ಸಂ.ಕಲಂ 337 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನು ಕೆ.ಕೆ.ಎಸ್.ಆರ್.ಟಿ.ಸಿ. ಬಸ್ ನಂ. ಕೆ.ಎ-32/ಎಫ್-2439 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಹೋಗಿ ರಸ್ತೆಯಲ್ಲಿ ಮುಂದೆ ಹೊರಟಿದ್ದ ಪ್ಯಾಷನ್ ಪ್ರೋ.ಮೋಟರ್ ಸೈಕಲ್ ನಂ.ಕೆ.ಎ-36/ಇ.ಬಿ-2439 ನೇದ್ದನ್ನು ಓವರ್ ಟೇಕ್ ಮಾಡುವ ಕಾಲಕ್ಕೆ ಹಿಂದಿನಿಂದ ಟಕ್ಕರಕೊಟ್ಟಿದ್ದು, ಬಸ್ ನಲ್ಲಿ ಪ್ರಾಯಾಣಿಸುತ್ತಿದ್ದ ಸಾಕ್ಷಿ ನಂ.6 ನೇದವರಿಗೆ ಮೂರು ಹಲ್ಲು, ಮುರಿದಿದ್ದು, ಮತ್ತು ಸಾಕ್ಷಿ ನಂ.8 ಇವರಿಗೆ ತಲೆಗೆ ಮತ್ತು ಎದೆಗೆ ಸಾದಾ & ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೇರೆಗೆ ನೀನ್ನು **ಭಾ.ದಂ.ಸಂ.ಕಲಂ 338 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನು ಕೆ.ಕೆ.ಎಸ್.ಆರ್.ಟಿ.ಸಿ. ಬಸ್ ನಂ. ಕೆ.ಎ-32/ಎಫ್-2439 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಹೋಗಿ ರಸ್ತೆಯಲ್ಲಿ ಮುಂದೆ ಹೊರಟಿದ್ದ ಪ್ಯಾಷನ್ ಪ್ರೋ.ಮೋಟರ್ ಸೈಕಲ್ ನಂ.ಕೆ.ಎ-36/ಇ.ಬಿ-2439 ನೇದ್ದನ್ನು ಓವರ್ ಟೇಕ್ ಮಾಡುವ ಕಾಲಕ್ಕೆ ಹಿಂದಿನಿಂದ ಟಕ್ಕರಕೊಟ್ಟಿದ್ದರಿಂದ ಮೋಟರ್

ಸೈಕಲ್ ಕೆಳಗೆ ಬಿದ್ದು ಚಾಲಕ ರುದ್ರಪ್ಪನಿಗೆ ತಲೆಯ ಬಲಗಡೆಗೆ ಭಾರಿ ರಕ್ತಗಾಯವಾಗಿ, ಬಲಗಾಲು ಪೂರ್ತಿಯಾಗಿ ಮುರಿದು ರಕ್ತಗಾಯವಾಗಿ ತಿವ್ರ ರಕ್ತಸ್ರಾವ ಆಗಿ ಹೆಚ್ಚಿನ ಚಿಕಿತ್ಸೆ ಕುರಿತು ದೇವದುರ್ಗ ಸರಕಾರಿ ಆಸ್ಪತ್ರೆಯಿಂದ ರಾಯಚೂರುಗೆ ಹೋಗುವ ಕಾಲಕ್ಕೆ ಮಧ್ಯಾಹ್ನ 3-00 ಗಂಟೆ ಸುಮಾರಿಗೆ ದಾರಿ ಮಧ್ಯೆ ಗಬ್ಬೂರುನಲ್ಲಿ ಮೃತಪಟ್ಟಿದ್ದು. ಆ ಮೇರೆಗೆ ನೀನು **ಭಾ.ದಂ.ಸಂ.ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿದ್ದು ಈ ನ್ಯಾಯಾಲಯದ ಸಂಜ್ಞೇಯತೆಯಲ್ಲಿ ಇರುತ್ತದೆ.**

**ಮೇಲ್ಕಂಡ ಎಲ್ಲಾ ಆರೋಪಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತವೆ.**

**ಪ್ರಶ್ನೆ ಃ ಮೇಲ್ಕಂಡ ಆಪಾದನೆಯನ್ನು ಅರ್ಥ ಮಾಡಿಕೊಂಡಿರಾ?**
**ಉತ್ತರ ಃ**
**ಪ್ರಶ್ನೆ ಃ ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರಾ?**
**ಉತ್ತರ ಃ**
**ಪ್ರಶ್ನೆ ಃ ಮೇಲ್ಕಂಡ ಆಪಾದನೆಯ ವಿಚಾರಣೆ ಆಗಬೇಕೆ?**
**ಉತ್ತರ ಃ**

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ಧೃಢೀಕರಿಸಿದೆ)

ಸಹಿ/-
**(ಶ್ರೀ ರಫೀಕ್ ಅಹ್ಮದ್ )**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವದುರ್ಗ.**

ದಿನಾಂಕ **23.02.2026**
ಸ್ಥಳ **ದೇವದುರ್ಗ**